## Sixth Semester 3 Year LL.B. Examination, September 2021 (June 2021)
## LAW OF EVIDENCE (2018 Onwards)

Duration : 3 Hours — Max. Marks : 80

**Instructions : 1. Answer any five questions from group (a) each question carries 10 marks**

**2. Answer any five questions from group (b) each question carries 06 marks**

**3. Answers should be written either in English or Kannada completely**

Q. No. 1. (a) Explain the relevancy of facts showing motive, preparation and conduct. Marks : 10

ಉದ್ದೇಶ, ಪೂರ್ವತಯಾರಿ ಮತ್ತು ನಡತೆಗಳನ್ನು ತೋರಿಸುವ ಘಟನೆಗಳ ಸುಸಂಬದ್ಧತೆಯನ್ನು ವಿವರಿಸಿರಿ.

Q. No. 1. (b) X is hit by a speedy vehicle and is severely injured. Y has deposed that he saw the speedy vehicle but not the accident and X has explained him about the accident. Is this statement relevant ? Marks : 06

X ನು ವೇಗವಾಗಿ ಬರುತ್ತಿರುವ ವಾಹನದಿಂದ ತಳ್ಳಲ್ಪಟ್ಟು ತೀವ್ರವಾಗಿ ಗಾಯಗೊಂಡಿದ್ದಾನೆ. ತಾನು ವೇಗವಾಗಿ ಹೋಗುತ್ತಿದ್ದ ವಾಹನವನ್ನು ನೋಡಿದ್ದು ಅಪಘಾತ ನೋಡಿಲ್ಲ ಆದರೆ ಅಪಘಾತದ ಕುರಿತು X ತನಗೆ ಹೇಳಿದರೆಂದು Y ಸಾಕ್ಷಿ ನುಡಿದಿದ್ದಾನೆ. ಈ ಹೇಳಿಕೆಯು ಸುಸಂಬದ್ಧವೇ ?

Q. No. 2. (a) State the persons whose admissions are relevant. Marks : 10

ಯಾವ ವ್ಯಕ್ತಿಗಳ ಒಪ್ಪುವಿಕೆಗಳು ಸುಸಂಬದ್ಧವೆಂಬುದನ್ನು ಹೇಳಿರಿ.

Q. No. 2. (b) A is accused of killing B. Prosecution has adduced evidence of marks on ground produced by fight between A and B prior to the incident. Is it relevant ? Marks : 06

ಅ ನು ಬ ನನ್ನು ಕೊಲೆಗೈದ ಆರೋಪಿಯಾಗಿದ್ದಾನೆ. ಘಟನೆಗಿಂತ ಮುಂಚೆ ಅ ಮತ್ತು ಬ ಇವರ ನಡುವಿನ ಗುದ್ದಾಟದಿಂದಾಗಿ ನೆಲದ ಮೇಲೆ ಆಗಿರುವ ಗುರುತುಗಳ ಕುರಿತು ಸಾಕ್ಷ್ಯವನ್ನು ಅಭಿಯೋಜನೆಯು ಮಂಡಿಸಿದೆ. ಇದು ಸುಸಂಬದ್ಧವೇ ?

Q. No. 3. (a) Discuss the relevancy of confession to Police and consequential recoveries. Marks : 10

ಪೊಲೀಸರಿಗೆ ಮಾಡಿಕೊಂಡ ತಪ್ಪೊಪ್ಪಿಗೆ ಮತ್ತು ತತ್ಪರಿಣಾಮದ ವಶಪಡಿಸಿಕೊಳ್ಳುವಿಕೆಗಳ ಸುಸಂಬದ್ಧತೆಯನ್ನು ಚರ್ಚಿಸಿರಿ.

Q. No. 3. (b) A court is required to form an opinion as to a matter. The information relating to it is stored in digital form. Who can be regard as an expert to give opinion in this matter ? Marks : 06

ಒಂದು ವಿಷಯದಲ್ಲಿ ನ್ಯಾಯಾಲಯವೊಂದು ಅಭಿಪ್ರಾಯ ತಳೆಯಬೇಕಾಗಿದೆ. ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ವಿದ್ಯುನ್ಮಾನ ಸಂಪನ್ಮೂಲದಲ್ಲಿ ಇಡಲಾಗಿದೆ. ಈ ವಿಷಯದಲ್ಲಿ ಅಭಿಪ್ರಾಯ ಕೊಡಲು ಯಾರನ್ನು ಪರಿಣತರೆಂದು ಪರಿಗಣಿಸಬಹುದು ?

Q. No. 4. (a) Examine the relevancy of dying declarations in dowry death cases. Marks : 10

ವರದಕ್ಷಿಣೆ ಸಾವು ಪ್ರಕರಣಗಳಲ್ಲಿ ಮರಣಕಾಲಿಕ ಹೇಳಿಕೆಗಳ ಸುಸಂಬದ್ಧತೆಯನ್ನು ಪರೀಕ್ಷಿಸಿರಿ.

Q. No. 4. (b) A is accused of committing a crime at Bengaluru or a particular day. There is evidence to show that on the same day A was at Ahmedabad. Is this relevant ? Marks : 06

ಒಂದು ನಿರ್ದಿಷ್ಟ ದಿನದಂದು ಅ ನು ಬೆಂಗಳೂರಿನಲ್ಲಿ ಅಪರಾಧವೊಂದನ್ನು ಮಾಡಿರುವುದಾಗಿ ಆಪಾದನೆಗೊಳಗಾಗಿದ್ದಾನೆ. ಆದರೆ ಅದೇ ದಿನ ಆತನು ಅಹ್ಮದಾಬಾದಿನಲ್ಲಿ ಇದ್ದನೆಂಬುದಕ್ಕೆ ಸಾಕ್ಷ್ಯವಿದೆ. ಇದು ಸುಸಂಬದ್ಧವೇ ?

Q. No. 5 (a) Explain the cases in which secondary evidence relating to documents may be given. Marks : 10

ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ದ್ವಿತೀಯಕ ಸಾಕ್ಷ್ಯ ಕೊಡಬಹುದಾದ ಸಂದರ್ಭಗಳನ್ನು ವಿವರಿಸಿರಿ.

Q. No. 5 (b) A, a married woman has committed suicide after leaving a suicide note that has husband subjected her to cruelty. Decide the relevancy of this suicide note. Marks : 06

ಅ ಎಂಬ ವಿವಾಹಿತ ಮಹಿಳೆ ಆತ್ಮಹತ್ಯೆ ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದು ತನ್ನ ಗಂಡ ತನಗೆ ಕ್ರೌರ್ಯ ಮಾಡಿರುವುದನ್ನು ಬರೆದಿದ್ದಾಳೆ. ಈ ಆತ್ಮಹತ್ಯೆ ಟಿಪ್ಪಣಿಯ ಸುಸಂಬದ್ಧತೆಯನ್ನು ನಿರ್ಣಯಿಸಿರಿ.

Q. No. 6. (a) Explain the provisions relating to the exclusion of oral by documentary evidence. Marks : 10

ದಸ್ತಾವೇಜು ಸಾಕ್ಷ್ಯದಿಂದ ಮೌಖಿಕ ಸಾಕ್ಷ್ಯ ಹೊರಹಾಕುವಿಕೆಗೆ ಸಂಬಂಧಿಸಿದ ಉಪಬಂಧಗಳನ್ನು ವಿವರಿಸಿರಿ.

| | | | |
|---|---|---|---|
| Q. No. 6 | (b) | A has drawn a bill on B for Rs. 5,000 payable to C. B is denying the authority of A to draw the bill. Decide.<br>A ನು ಕ ನಿಗೆ ಸಂದಾಯವಾಗುವಂತೆ ಬ ನ ಮೇಲೆ ರೂಪಾಯಿ 5,000 ಗಳ ಬಿಲ್ಲನ್ನು ಬರೆದಿದ್ದಾನೆ. ಬ ನು ಅ ನ ಬಿಲ್ಲು ಬರೆಯುವ ಅಧಿಕಾರವನ್ನು ನಿರಾಕರಿಸಿದ್ದಾನೆ. ನಿರ್ಧರಿಸಿರಿ. | Marks : 06 |
| Q. No. 7. | (a) | Explain the scope of privileged communications between advocate and his client.<br>ವಕೀಲ ಮತ್ತು ಅವನ ಕಕ್ಷಿದಾರರ ನಡುವಿನ ವಿಶೇಷಾಧಿಕಾರದ ಸಂವಹನಗಳ ವ್ಯಾಪ್ತಿಯನ್ನು ವಿವರಿಸಿರಿ. | Marks : 10 |
| Q. No. 7. | (b) | In a prosecution for rape, a prosecution witness has turned hostile. Can he be cross-examined by the prosecution ?<br>ಅತ್ಯಾಚಾರ ಪ್ರಕರಣವೊಂದರಲ್ಲಿ, ಅಭಿಯೋಜನೆ ಸಾಕ್ಷಿಯೊಬ್ಬನು ಪ್ರತಿಕೂಲ ಸಾಕ್ಷ್ಯ ನುಡಿದಿದ್ದಾನೆ. ಅಭಿಯೋಜನೆಯು ಅವನನ್ನು ಪಾಟೀ ಸವಾಲು ಮಾಡಬಹುದೇ ? | Marks : 06 |
| Q. No. 8. | (a) | Discuss the scope of cross examination and explain the questions lawful in cross examination.<br>ಪಾಟೀ ಸವಾಲಿನ ವ್ಯಾಪ್ತಿಯನ್ನು ಚರ್ಚಿಸಿರಿ ಮತ್ತು ಪಾಟೀ ಸವಾಲಿನಲ್ಲಿಯ ಪ್ರಶ್ನೆಗಳ ಕಾನೂನುಬದ್ಧತೆಯನ್ನು ವಿವರಿಸಿರಿ. | Marks : 10 |
| Q. No. 8. | (b) | Write a short note on leading questions.<br>ಉತ್ತರ ಸೂಚಕ ಪ್ರಶ್ನೆ ಕುರಿತಾಗಿ ಲಘು ಟಿಪ್ಪಣಿ ಬರೆಯಿರಿ. | Marks : 06 |
| Q. No. 9. | (a) | Define Estoppel. State the different kinds of estoppel.<br>ವಿಬಂಧ ತತ್ವವನ್ನು ವ್ಯಾಖ್ಯಾನಿಸಿ. ವಿವಿಧ ಪ್ರಕಾರಗಳ ವಿಬಂಧಗಳನ್ನು ತಿಳಿಸಿರಿ. | Marks : 10 |
| Q. No. 9. | (b) | Public Document.<br>ಸಾರ್ವಜನಿಕ ದಸ್ತಾವೇಜು. | Marks : 06 |
| Q. No. 10. | (a) | What is burden of proof ? On whom it lies ?<br>ರುಜುವಾತಿನ ಭಾರ ಎಂದರೇನು ? ಅದು ಯಾರ ಮೇಲೆ ಇರುತ್ತದೆ ? | Marks : 10 |
| Q. No. 10. | (b) | Hostile witness.<br>ಪ್ರತಿಕೂಲ ಸಾಕ್ಷಿ. | Marks : 06 |